# ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ (ಐ ಎಫ್ ಎ)
## **ಕಲಾ ಅಭ್ಯಾಸ** ಕಾರ್ಯಕ್ರಮದಡಿಯಲ್ಲಿ

## ***ಕಲಾ ಅನ್ವೇಷಣೆ*ಗಳಿಗೆ**

ಅರ್ಜಿಗಳನ್ನು ಆಹ್ವಾನಿಸುತ್ತದೆ.

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಏಪ್ರಿಲ್ ೧೯, ೨೦೨೪ .**

ಕಲಾ ಅಭ್ಯಾಸ ಕಾರ್ಯಕ್ರಮವು, ಕಲಾವಿದರು ತಮ್ಮ ಪ್ರಸ್ತುತ ಅಭ್ಯಾಸವನ್ನು ಹೊಸ ದಿಕ್ಕಿನಲ್ಲಿ ವಿಸ್ತರಿಸಲು ಸಹಕಾರಿಯಾದ ಯೋಜನೆಗಳನ್ನು ಕೈಗೊಳ್ಳಲು ಉದ್ದೇಶಿಸುತ್ತದೆ. ಈ ಯೋಜನೆಗಳು ಪ್ರಯೋಗಶೀಲವಾಗಿದ್ದು, ಈಗಾಗಲೇ ಒಪ್ಪಿತವಾದ ರೂಢಿಗಳನ್ನು ಪ್ರಶ್ನಿಸುವಂಥದ್ದಾಗಿರಬಹುದು, ತಮ್ಮ ಕಲಾ ಪ್ರಕಾರದಲ್ಲಿ ವಸ್ತು, ರೂಪ, ಮಾಧ್ಯಮಗಳ ಹೊಸ ಸಾಧ್ಯತೆಗಳನ್ನು ಹುಡುಕುವಂಥದ್ದಾಗಿರಬಹುದು, ರಂಗಸ್ಥಳ, ಶ್ರೋತೃಗಳು/ ವೀಕ್ಷಕರು, ಅಥವಾ ಸಮುದಾಯದ ಜೊತೆಗೆ ಹೊಸ ರೀತಿಯ ಪಾಲ್ಗೊಳ್ಳುವಿಕೆಯನ್ನು ಹುಡುಕುವಂಥದ್ದಾಗಿರಬಹುದು.

*ಚಲನಚಿತ್ರ ನಿರ್ದೇಶಕರೊಬ್ಬರು ಹಳೆಯ ಊರೊಂದರ ನೆನಪುಗಳ ಆಧಾರದಮೇಲೆ ಕಾಲ್ಪನಿಕ ಗ್ರಾಫಿಕ್ ಕಥನವೊಂದನ್ನು ರಚಿಸುತ್ತಾರೆ.*
*ನೃತ್ಯ ನಿರ್ದೇಶಕರೊಬ್ಬರು ತನ್ನ ಸಮುದಾಯದ ಸಹಯೋಗದಲ್ಲಿ, ಕಳೆದುಹೋದ ಜಾನಪದ ಕಥೆಗಳನ್ನು ಪುನರುಜ್ಜೀವನಗೊಳಿಸಲು 'ಜಾನಪದ ನೃತ್ಯ'ವೊಂದನ್ನು ಸೃಷ್ಟಿಸುವರು.*
*ಸಮಕಾಲೀನ ಕಲಾವಿದರೊಬ್ಬರು ಕುಟುಂಬದವರೊಬ್ಬರು ಕೂಡಿಟ್ಟ ದಿನನಿತ್ಯದ ಬಳಕೆಯ ಸಾಮಗ್ರಿಗಳನ್ನು ಕಾಪಾಡಲು ವರ್ಚುವಲ್ ಸಂಗ್ರಹಾಲಯವೊಂದನ್ನು ನಿರ್ಮಿಸುತ್ತಾರೆ.*
*ಸಾಮಾಜಿಕ ವಿನ್ಯಾಸಕಾರರೊಬ್ಬರು ಹಳ್ಳಿಯ ಹೆಂಗಸರನ್ನು, ಅವರ ಹೊರಾಂಗಣ ಅನುಭವಗಳನ್ನು ಮೆಲುಕುಹಾಕಲು ಒಟ್ಟುಗೂಡಿಸಿ, ಕಲಾಕೃತಿಯನ್ನು ನಿರ್ಮಿಸುತ್ತಾರೆ.*

ಕಲೆಯ ಅಭ್ಯಾಸದಲ್ಲಿ ಯಾವುದೋ ಹೊಸ ಕಲ್ಪನೆ ನಮಗೆ ಅಚಾನಕ್ಕಾಗಿ ಹೊಳೆಯಬಹುದು, ಅಥವಾ ಉತ್ಸುಕಗೊಳಿಸುವ ಹೊಸದೊಂದು ದಿಕ್ಕಿನಲ್ಲಿ ನಡೆಯುವ ಹಂಬಲ ಉಂಟಾಗಬಹುದು. ಆದರೆ ನಮ್ಮ ಪ್ರಸ್ತುತ ಸಂದರ್ಭ ಹಾಗೂ ಕಲಾ ಅಭ್ಯಾಸದ ನೆಲೆಗಟ್ಟಿನಲ್ಲಿ ಈ ಕಲ್ಪನೆಗಳು / ವಿಚಾರಗಳ ಅನ್ವೇಷಣೆಯ ಈ ಪಯಣ ತಾತ್ಕಾಲಿಕವೂ, ಅನಿಶ್ಚಿತತೆಯಿಂದ ಕೂಡಿರುವಂಥದ್ದೂ ಎನಿಸಬಹುದು. ನಮ್ಮ ಕಲಾ ಅಭ್ಯಾಸಕ್ಕೆ ಇದರಿಂದ ಏನು ಸಿಗಲಿದೆ (ಅಥವಾ ಇಲ್ಲ), ಇದು ನಮ್ಮನ್ನು ಎಲ್ಲಿಗೆ ಕೊಂಡೊಯ್ಯಲಿದೆ ಎನ್ನುವುದೂ ಆ ಸಂದರ್ಭದಲ್ಲಿ ನಿಚ್ಚಳವಾಗಿಲ್ಲದೆ ಇರಬಹುದು. ಆದರೂ ಇಂತಹದ್ದೊಂದು ಪಯಣದ ಅವಶ್ಯಕತೆ ನಮಗೆ ಅರಿವಾಗಬಹುದು, ಇಂತಹ ಸಮಯದಲ್ಲಿ ಸ್ವಲ್ಪ ಮಟ್ಟಿನ ಸಹಕಾರ ದೊರೆತರೆ ಸಹಾಯವಾಗಬಹುದು.

ಕಲಾ ಅಭ್ಯಾಸ ಕಾರ್ಯಕ್ರಮದಡಿಯಲ್ಲಿ, ಹಿಂದೆಂದೂ ಕಂಡುಬರದ, ಯಾರೂ ಪ್ರಯತ್ನಿಸಿರದ ಹೊಚ್ಚ ಹೊಸ ಕಲ್ಪನೆಯನ್ನು ಪರೀಕ್ಷಿಸುವ, ಅದರ ಸಾಧ್ಯತೆಗಳನ್ನು ಪರಿಶೀಲಿಸುವ ಪ್ರಯತ್ನಗಳು - *ಕಲಾ ಅನ್ವೇಷಣೆ*ಗಳಿಗಾಗಿ ಪ್ರಸ್ತಾವನೆಗಳನ್ನು ಆಹ್ವಾನಿಸುತ್ತೇವೆ. **ಇವುಗಳ ಪರಿಣಾಮವಾಗಿ ಕಲಾಕೃತಿಯೊಂದು ಹುಟ್ಟಬಹುದು, ಹುಟ್ಟದೆಯೂ ಇರಬಹುದು**. ಇವುಗಳು ಸಂಶೋಧನೆ, ಸ್ಕ್ರಿಪ್ಟ್ ಬರಹ, ಚಿತ್ರೀಕರಣದ ಸ್ಥಳಕ್ಕಾಗಿ ಹುಡುಕಾಟ, ಅನಿಮಟಿಕ್ಸ್, ಜಾಮಿಂಗ್ - ಸಂಗೀತ ಸಹಯೋಗ, ಚಿತ್ರ ಕಥೆಯ ನಿರ್ಮಾಣ, ರಂಗತಾಲೀಮು, ಸ್ಯಾಂಪ್ಲಿಂಗ್ , ರೊಬೊಟಿಕ್ಸ್, ಪ್ರಯೋಗಶಾಲೆಯಲ್ಲಿನ ಅನ್ವೇಷಣೆಗಳು - ಹೀಗೆ ಒಂದು ಕಲ್ಪನೆಯ ಸಾಧ್ಯತೆಗಳನ್ನು ಅನ್ವೇಷಿಸುವ ಕೆಲಸಗಳಿರಬಹುದು.

ಇತರ ಭಾರತೀಯ ಭಾಷೆಗಳಲ್ಲಿ ಈ ಪ್ರಸ್ತಾವನೆಯನ್ನು ಓದಲು ಇಲ್ಲಿ ಕ್ಲಿಕ್ ಮಾಡಿ.

**ಯೋಜನೆಯ ಅವಧಿ:** ಗರಿಷ್ಠ 6 ತಿಂಗಳುಗಳು

**ಅನುದಾನ ಮಿತಿ:** ಗರಿಷ್ಠ ರೂ 1,00,000/-

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಏಪ್ರಿಲ್ 19, 2024.

**ಪ್ರಸ್ತಾವನೆಗಳನ್ನು ಯಾರು ಕಳುಹಿಸಬಹುದು?**
ಈ ಕಾರ್ಯಕ್ರಮದಡಿಯಲ್ಲಿ ನಿರ್ದಿಷ್ಟ ಕಲಾಪ್ರಕಾರವೊಂದರಲ್ಲಿ ಅಥವಾ ಅಂತರ್ಶಿಸ್ತೀಯವಾಗಿ ಕೆಲಸ ಮಾಡುತ್ತಿರುವ ಕಲಾವಿದರು ಪ್ರಸ್ತಾವನೆಯನ್ನು ಸಲ್ಲಿಸಬಹುದಾಗಿದೆ.

- ಸಂಗೀತ, ಶಬ್ದ, ಪಠ್ಯ, ನೃತ್ಯ, ಚಲನೆ, ನಾಟಕ, ಗೊಂಬೆಯಾಟ, ಕಥೆ ಹೇಳುವುದು, ಇಂದ್ರಜಾಲ, ಸರ್ಕಸ್ ಹಾಗೂ ಇನ್ನಿತರ ಪ್ರದರ್ಶನ ಕಲೆಗಳಲ್ಲಿ ತೊಡಗಿಕೊಂಡ ಕಲಾವಿದರಿರಬಹುದು.

- ಸಿನಿಮಾ (ಸಾಕ್ಷ್ಯಚಿತ್ರ ಹಾಗೂ ಕಲ್ಪನೆಯ ಆಧಾರಿತ), ಅನಿಮೇಶನ್, ಛಾಯಾಚಿತ್ರ, ಇನ್ಸ್ಟಲೇಶನ್, ಹೊಸ ಮೀಡಿಯಾ, ಕೃತಕ ಬುದ್ಧಿವಂತಿಕೆ (ಆರ್ಟಿಫಿಷಿಯಲ್ ಇಂಟೆಲಿಜೆನ್ಸ್), ರೊಬೊಟಿಕ್ಸ್, ಸಂವಹನಾತ್ಮಕ ಕಲೆಗಳು, ಗೇಮಿಂಗ್, ಚಿತ್ರಕಲೆ, ಶಿಲ್ಪಕಲೆ, ಪ್ರಿಂಟ್ ತಯಾರಿಕೆ, ಕಾಮಿಕ್ ಪುಸ್ತಕ, ಗ್ರಾಫಿಕ್ ಕಥನ, ಕಲಾವಿದರ ಪುಸ್ತಕ (ಆರ್ಟಿಸ್ಟ್ ಬುಕ್) ಹಾಗೂ ಇನ್ನಿತರ ಕಲೆಗಳಲ್ಲಿ ತೊಡಗಿಕೊಂಡಿರುವ ದೃಶ್ಯ ಕಲಾವಿದರಿರಬಹುದು.

- ಕಲಾ ನಿರ್ವಾಹಕರು (ಕ್ಯುರೇಟರ್ಸ್) - ಅದರಲ್ಲೂ ಗ್ಯಾಲರಿಗಳ ಹೊರತಾಗಿ ಕೆಲಸ ಮಾಡುತ್ತಿರುವವರು.

- ಕವಿಗಳು, ಕಾದಂಬರಿಕಾರರು, ನಾಟಕಕಾರರು

- ಅಂತರ್ಶಿಸ್ತೀಯ ಕೆಲಸದಲ್ಲಿ ತೊಡಗಿಕೊಂಡಿರುವವರು

**ಅರ್ಹತೆ:**
ನೀವು ಭಾರತೀಯ ನಾಗರಿಕರಾಗಿದ್ದಲ್ಲಿ ಯೋಜನಾ ಪ್ರಸ್ತಾವನೆಯನ್ನು ಕಳುಹಿಸಲು ನೀವು ಅರ್ಹರು. ಯೋಜನೆಯಡಿಯಲ್ಲಿ ನಿಮ್ಮ ಜೊತೆ ಸಹಯೋಗ ಕೈಗೊಳ್ಳುವ ಕಲಾವಿದರು ಕೂಡ ಭಾರತೀಯ ನಾಗರಿಕರಾಗಿರುವುದು ಅವಶ್ಯಕ.  ವಿವರಗಳಿಗಾಗಿ ಈ ಲಿಂಕ್ ನೋಡಿ.

**ಯೋಜನಾ ಪ್ರಸ್ತಾವನೆಗಳನ್ನು ಕಳುಹಿಸಬೇಕಾದ ಕ್ರಮ:**

**ನೀವು ಇಂಗ್ಲಿಷ್ ಸೇರಿದಂತೆ ಯಾವುದೇ ಭಾರತೀಯ ಭಾಷೆಯಲ್ಲಿ ಪ್ರಸ್ತಾವನೆಯನ್ನು ಕಳುಹಿಸಬಹುದು. ಐ ಎಫ್ ಎ ಇಂಗ್ಲಿಶ್ ಹೊರತಾಗಿ ಇತರ ಭಾರತೀಯ ಭಾಷೆಗಳ ಯೋಜನೆಗಳಿಗೆ ಪ್ರೋತ್ಸಾಹ ನೀಡುತ್ತದೆ**

ನಮಗೆ ಈ ಮಾಹಿತಿಗಳೊಡನೆ ಪ್ರಸ್ತಾವನೆಯನ್ನು ಕಳುಹಿಸಿ:

- ನಿಮ್ಮ ಪ್ರಸ್ತುತ ಕಲಾ ಅಭ್ಯಾಸ, ಕಲಾವಿದರಾಗಿ ಕಾಳಜಿಗಳು ಹಾಗೂ ಆಸಕ್ತಿಗಳು
- ನೀವು ಉದ್ದೇಶಿಸಿರುವ ಕಲಾ ಅನ್ವೇಷಣೆಯ ವಿವರಗಳು ಹಾಗೂ ಕಾರಣಗಳು
- ವಿಸ್ತೃತ ಸಮಯಸೂಚಿ ಹಾಗೂ ಆಯವ್ಯಯ ಪತ್ರ
- ನಿಮ್ಮ ಈ ಹಿಂದಿನ ಕೆಲಸದ ಉದಾಹರಣೆಗಳು
- ನಿಮ್ಮ ವಿಳಾಸ, ದೂರವಾಣಿ ಸಂಖ್ಯೆ ಹಾಗೂ ಈಮೈಲ್ ವಿಳಾಸದೊಂದಿಗೆ ನಿಮ್ಮ ಸ್ವವಿವರ (ಬಯೋಡೇಟಾ)

- ನಿಮ್ಮ ಪ್ರಶ್ನೆಗಳು ಹಾಗೂ ಕರಡು ಯೋಜನೆಗಳನ್ನು ಐ ಎಫ್ ಎ ಸಿಬ್ಬಂದಿಯ ಪ್ರತಿಕ್ರಿಯೆಗಾಗಿ ಏಪ್ರಿಲ್ 12, 2024ರ ಒಳಗಾಗಿ ಬರಹ, ಶ್ರಾವ್ಯ ಅಥವಾ ದೃಶ್ಯ(ವೀಡಿಯೊ) ರೂಪದಲ್ಲಿ ಕಳುಹಿಸಬಹುದು.

- ನಿಮ್ಮ ಅಂತಿಮ ಅರ್ಜಿಯನ್ನು 25MB ಮೀರದ ಒಂದೇ ಮಿಂಚಂಚೆಯ ಮುಖಾಂತರ **ಜಾನ್ ಜೇವಿಯರ್ಸ್**, ಕಾರ್ಯಕ್ರಮ ಅಧಿಕಾರಿ - ಇವರಿಗೆ (ಮಿಂಚಂಚೆ : john@indiaifa.org) **‘ಕಲಾ ಅನ್ವೇಷಣೆಗಾಗಿ ಯೋಜನಾ ಪ್ರಸ್ತಾವನೆ (ಕಲಾ ಅಭ್ಯಾಸ)’** ಎನ್ನುವ ವಿಷಯ ಸೂಚಿಯೊಂದಿಗೆ, ಏಪ್ರಿಲ್ **19, 2024**ರಂದು ಅಥವಾ ಅದಕ್ಕೆ ಮೊದಲು ಕಳುಹಿಸಿ.

ನಿಮ್ಮ ಪ್ರಸ್ತಾವನೆಯನ್ನು ಕುರಿತಂತೆ ಯಾವುದೇ ಪ್ರಶ್ನೆ/ಸಂದೇಹಗಳಿದ್ದಲ್ಲಿ, ಹೆಚ್ಚಿನ ಮಾಹಿತಿ ಬೇಕಿದ್ದಲ್ಲಿ ಜಾನ್ ಜೇವಿಯರ್ಸ್ ಅವರನ್ನು ಮಿಂಚಂಚೆಯ ಮೂಲಕ ಸಂಪರ್ಕಿಸಿ: john@indiaifa.org.

**ಆಯ್ಕೆಯ ಪ್ರಕ್ರಿಯೆ:**

ಕೊನೆಯ ಸುತ್ತಿಗೆ ಆಯ್ಕೆಯಾದ ಪ್ರಸ್ತಾವನೆಗಳನ್ನು ಬಾಹ್ಯ ತಜ್ಞರ ಆಯ್ಕೆ ಸಮಿತಿ ಮೌಲ್ಯಮಾಪನ ಮಾಡುತ್ತದೆ. ಇದಕ್ಕಾಗಿ ಅರ್ಜಿದಾರರು ತಮ್ಮ ಯೋಜನೆಯ ಪರಿಕಲ್ಪನೆಯನ್ನು ಈ ಸಮಿತಿಯ ಮುಂದೆ ಪ್ರತಿಪಾದಿಸಬೇಕಾಗುತ್ತದೆ. ಆಯ್ಕೆಯಾದ ಯೋಜನೆಗಳನ್ನು ಜುಲೈ **2024ರಲ್ಲಿ** ಘೋಷಿಸಲಾಗುವುದು

ಆಯ್ಕೆಯಾದ ಎಲ್ಲ ಯೋಜನೆಗಳನ್ನೂ ಐ ಎಫ್ ಏ ಸ್ವತಃ ಕಾರ್ಯಗತಗೊಳಿಸುತ್ತದೆ.

***ಐ ಎಫ್ ಎ ಮಕ್ಕಳನ್ನೊಳಗೊಂಡಂತೆ ಎಲ್ಲರಿಗೂ ಬೆಂಬಲ, ಗೌರವ, ರಕ್ಷಣೆ ನೀಡುವ ಸುರಕ್ಷಿತ ವಾತಾವರಣವನ್ನು ನಿರ್ಮಿಸಲು ಬದ್ಧವಾಗಿದೆ. ಎಲ್ಲ ಅರ್ಜಿದಾರರೂ ಇದಕ್ಕೆ ಬದ್ಧವಾಗಿದ್ದು, ಇದನ್ನು ಸದಾ ಎತ್ತಿಹಿಡಿಯಬೇಕು.***